# ವನವಾಸಿಗಳು!

ಗಿರಿಜನರನ್ನು ಕೆಲವರು 'ವನವಾಸಿಗಳು' ಎಂದೂ ಕರೆಯುತ್ತಾರೆ. ಅವರನ್ನು ಸಾಮಾನ್ಯವಾಗಿ ಆದಿವಾಸಿಗಳೆಂದು ಗುರುತಿಸಲಾಗಿದೆ. ಆದಿವಾಸಿಗಳೆಂದು ಕರೆಯುವಲ್ಲಿ ಅರ್ಥವೂ ಇದೆ: ಏಕೆಂದರೆ ಮೂಲತಃ ಮಾನವ ಅರಣ್ಯದಲ್ಲೇ ಹುಟ್ಟಿ ಬೆಳೆದವನೇ! ಅಲ್ಲಿಂದಲೇ ನಗರಗಳನ್ನು ನಿರ್ಮಾಣ ಮಾಡಿ, ಆಧುನಿಕನೆನಿಸಿ 'ನಾಗರಿಕ'ನಾಗಿದ್ದಾನೆ. ಅವನ ನಿಜವಾದ ಪ್ರವೃತ್ತಿಗಳು ಇಂದಿಗೂ ಅರಣ್ಯದ ವಾಸನೆಯನ್ನು ಬಿಟ್ಟುಕೊಡದಿರುವುದು ಇದಕ್ಕೆ ಸಾಕ್ಷಿಯಾಗಿವೆ. ಆಧುನಿಕ ಮಾನವ ತನ್ನನ್ನು ತಾನು ಎಷ್ಟೇ 'ನಾಗರಿಕ'ನೆಂದು ಕರೆದುಕೊಂಡರೂ ಅರಣ್ಯ ಇಂದಿಗೂ ಅವನ ಅತ್ಯಂತ ಆಕರ್ಷಣೀಯ ಸಂಗತಿಯಾಗಿದೆ. ವಾಸಕ್ಕಲ್ಲದಿದ್ದರೂ ಪ್ರವಾಸಕ್ಕಾದರೂ ಅಲ್ಲಿಗೆ ಆಗಾಗ್ಗೆ ಹೋಗಿಬರಲು ಅವನ ಮನಸ್ಸು ಬಯಸುತ್ತಿರುತ್ತದೆ. ಇದರರ್ಥ: ಅರಣ್ಯಕ್ಕೆ ಸಹಜವಾದ ಜೀವನ ಮಧುರಸೆಲೆ ಇದೆ ಎಂದಾಯಿತು. ಅದರಲ್ಲಿನ ಜೀವ ವೈವಿಧ್ಯ ಮತ್ತು ಪ್ರಕೃತಿದತ್ತ ದ್ರವ್ಯಶಕ್ತಿ ಸದಾ ವಿಕಾಸಶೀಲವೂ ಸೃಷ್ಟಿಗಮ್ಯವೂ ಆಗಿರುತ್ತದೆ. ಇಂಥ ಶಕ್ತಿಮೂಲದಿಂದಲೇ ಹುಟ್ಟಿಬಂದ ನಾಗರಿಕ ನಗರಗಳನ್ನು ಕಟ್ಟಿ ನಗರ ವಾಸಿಯಾದ ಮೇಲೆ, ಕಾಡಿನ ಬದುಕನ್ನು ನಿಕೃಷ್ಟವಾಗಿ ಕಂಡದ್ದು ಮಾತ್ರ ಚರಿತ್ರೆಯ ವ್ಯಂಗ್ಯವೇ ಸರಿ!

ನಮ್ಮ ವೇದ ಕಾಲದ ದಾರ್ಶನಿಕರು ಪ್ರಕೃತಿಯ ಆರಾಧಕರಾಗಿದ್ದರು; ಅರಣ್ಯದ ಶಕ್ತಿಶೀಲತೆಯನ್ನು ಗುರುತಿಸಿದ್ದರು. ಅರಣ್ಯಕ್ಕೆ ಸಕಲ ಜೀವರಾಶಿಗಳ ನಡುವೆ ಹೊಂದಾಣಿಕೆಯನ್ನು, ಸಹಬಾಳುವೆಯನ್ನು ರೂಪಿಸುವ ಮತ್ತು ತನ್ನ ಮಧುರ ನಿನಾದ ಜೋಗುಳದ ಮೂಲಕ ಆತ್ಮಕ್ಕೆ ಶಾಂತಿಯನ್ನು ಮೂಡಿಸಿ, ಧೀಶಕ್ತಿಯನ್ನು ಉದ್ದೀಪಿಸುವ ಶಕ್ತಿಯಿದೆಯೆಂದು ಅನುಭವದಿಂದ ಕಂಡುಕೊಂಡಿದ್ದರು. ಆ ಕಾರಣದಿಂದ ಅವರು ನಗರವಾಸಿಗಳಾಗಿದ್ದರೂ ವಾನಪ್ರಸ್ಥವೆಂಬ ಆಶ್ರಮ ಧರ್ಮದ ಅನಿವಾರ್ಯತೆಯನ್ನು ಪ್ರತಿಪಾದಿಸಿದ್ದರು. ಲೌಕಿಕದ ಎಲ್ಲ ಮೋಹ ಸಂಬಂಧಗಳನ್ನು ಕಳಚಿಕೊಂಡು ನೆಮ್ಮದಿಯ ಅಂತ್ಯವನ್ನು ಮುಟ್ಟಬೇಕಾದರೆ ಈ ವಾನಪ್ರಸ್ಥ ಅನಿವಾರ್ಯ ಸಾಧನವೆಂದು ಮನಗಂಡಿದ್ದರು.

ಜಗತ್ತಿನ ಎಲ್ಲ ಗ್ರಾಮವಾಸಿಗಳನ್ನು ಅರಣ್ಯ ಪ್ರೇಮಿಗಳೆಂದೇ ತಿಳಿಯಬೇಕು. ಸಾಮಾನ್ಯವಾಗಿ ಗ್ರಾಮಗಳು ಅರಣ್ಯಕ್ಕೆ ಅನತಿ ದೂರದಲ್ಲೇ ಇರುತ್ತವೆ. ಅವರ ಬೇಕು ಬೇಡಗಳನ್ನು ಅದು ಪೂರೈಸುತ್ತಿರುತ್ತದೆ. ಕಾಡಿನ ಅವಲಂಬನೆ ಗ್ರಾಮವಾಸಿಗಳಲ್ಲಿ ಅಧಿಕ. ನಗರವಾಸಿಗಳಿಗಿಂತ ಇವರು ಪ್ರಕೃತಿ ಪ್ರಿಯ ಜನರು. ಆದಿವಾಸಿಗಳು ಕಾಡೊಳಗೇ ಜೀವನ ಕಂಡುಕೊಂಡರೆ, ಇವರು ಕಾಡಿನ ಅಂಚಿನಲ್ಲಿ ಕಂಡುಕೊಳ್ಳಲು ಯತ್ನಿಸಿತ್ತಾರೆ. ತಮ್ಮ ದನಕರುಗಳ ಮೇವು, ಬೇಸಾಯ ಸಾಧನಗಳು, ಎರವಲು ಮುಂತಾದವುಗಳನ್ನು ಕಾಡಿನಿಂದ ಪಡೆದು ಕೃಷಿ ಜೀವಿಗಳಾದರೆ, ಆದಿವಾಸಿಗಳು ಸಂಪೂರ್ಣವಾಗಿ ಕಾಡನ್ನೇ ಅವಲಂಬಿಸಿ ಬದುಕು ಮಾಡುತ್ತಾರೆ. ಆದಿವಾಸಿಗಳ ಜೀವನ ಶೈಲಿ, ಆಹಾರ ಪದ್ಧತಿ, ವಾಸ ಸ್ಥಳಗಳು ಪ್ರಕೃತಿಯಲ್ಲಿ ಲೀನಗೊಂಡಂತೆ ಇರುತ್ತವೆ. ಅಂದಂದಿನ ಆಹಾರವನ್ನು ಅಂದಂದೇ ಸಂಪಾದಿಸುವ ಅವರಲ್ಲಿ ಕೂಡಿಡುವ ಪ್ರವೃತ್ತಿ ಅಪರೂಪ. ಆದ್ದರಿಂದ ಅವರಲ್ಲಿ ನಿಜವಾದ ಸಮಾನತಾವಾದ, ಅವರಿಗರಿವಿಲ್ಲದಂತೆಯೇ ಕೆಲಸ ಮಾಡುತ್ತಿರುತ್ತದೆ. ಅದು ಅವರ ವೇಷ ಭೂಷಣ ಮತ್ತು ಆಹಾರ ಪದ್ಧತಿಯಲ್ಲಿ ದಟ್ಟವಾಗಿ ಎದ್ದು ತೋರುತ್ತದೆ; ದೈಹಿಕ ರಚನೆಯಲ್ಲಿ ಪಡಿಮೂಡಿರುತ್ತದೆ.

ಕಾಡಿನಿಂದ ಹೊರಬಂದು ಗ್ರಾಮಗಳನ್ನು ಕಟ್ಟಿ, ಅಲ್ಲಿ ನೆಲೆ ನಿಂತು, ಮತ್ತೆ ನಾಗರಿಕ ತಂತ್ರಜ್ಞಾನಗಳಿಂದ ನಗರಗಳನ್ನು ರಚಿಸಿಕೊಂಡು, ಆಧುನಿಕರೆನ್ನಿಸಿಕೊಂಡು ನಗರವಾಸಿಗಳಿಂದ ಜನ ತಾವು ನಡೆದುಬಂದ ಹಾದಿಯನ್ನು ಕೀಳೆಂದು ಭಾವಿಸುವುದು ತರವಲ್ಲ. ನಿಕೃಷ್ಟವಾಗಿ ಕಾಣುವ ಶ್ರೇಣೀಕೃತ ಮನೋಧರ್ಮ ಭಾರತೀಯ ಜಾತಿ ಪದ್ಧತಿಯ ಅನಿಷ್ಟತೆಯನ್ನು ನೆನಪಿಸುತ್ತದೆ. ಗ್ರಾಮವಾಸಿಗಳು ಆದಿವಾಸಿಗಳನ್ನು ಕೀಳಾಗಿ ಕಂಡರೆ, ನಗರ ವಾಸಿಗಳು, ಗ್ರಾಮ ವಾಸಿಗಳನ್ನು ಮತ್ತು ಆದಿವಾಸಿಗಳನ್ನು ಏಕಕಾಲದಲ್ಲಿ ಕೀಳಾಗಿ ನೋಡುತ್ತಾರೆ. 'ಕಾಡುಜನ', 'ಅನಾಗರಿಕ', 'ಸಂಸ್ಕೃತಿಯಿಲ್ಲದವ' –ಎಂಬೆಲ್ಲಾ ಮಾತುಗಳಿಂದ ಅವರನ್ನು ಜರಿಯಲಾಗುತ್ತದೆ.

'ವನವಾಸ'ವೆಂಬ ಮಾತೇ ನಮ್ಮಲ್ಲಿ 'ಕಷ್ಟ ಅನುಭವಿಸುವ ಸ್ಥಿತಿ' ಎಂದು ವ್ಯಾಖ್ಯಾನಕ್ಕೊಳಪಡುತ್ತದೆ. ಅತಿಯಾದ ಸಂಕಟ, ಬಡತನ ಅನುಭವಿಸುತ್ತಿದ್ದರೆ ನಾನು 'ವನವಾಸ ಅನುಭವಿಸುತ್ತಿದ್ದೇನೆ' ಎಂಬ ಉಕ್ತಿ ತನಗೆ ತಾನೇ ಹೊರಬೀಳುತ್ತದೆ. ಶಾಪಗ್ರಸ್ಥರೂ ವಚನ ಭ್ರಷ್ಟರೂ ಜೀವನದಲ್ಲಿ ಸೋಲುಂಡವರೂ ವನವಾಸ ಮಾಡುವುದು ಅನಿವಾರ್ಯವಾಗುತ್ತದೆ. ಅಂದರೆ ನಾಗರಿಕರಿಗೆ 'ವನವಾಸ' ಒಂದು ಶಿಕ್ಷೆ. ನಮ್ಮ ಪ್ರಾಚೀನ ಕಾಲದ ಮೇಲ್ಜಾತಿಯೊಂದು ಮದುವೆಗೆ ಮುನ್ನ ಮೈನೆರೆದು ಕೂತ ಹೆಣ್ಣುಮಗಳನ್ನು ಕಾಡಿಗಟ್ಟುವ ಪದ್ಧತಿಯಿತ್ತು; ಮದುವೆಯಾಗಿ ಗಂಡನ ಸಾವಿನಿಂದ ವಿಧವೆಯಾದ ತರುಣಿ ಅನೈತಿಕ(?) ಲೈಂಗಿಕ ಸಂಬಂಧ ಹೊಂದಿದ್ದಲ್ಲಿ ಘಟಶ್ರಾದ್ಧ ಮಾಡಿ, ಅರಣ್ಯಕ್ಕೆ ದೂಡುವ ಪದ್ಧತಿಯಿತ್ತು. ಇಲ್ಲೆಲ್ಲಾ 'ವನವಾಸ'ವೆಂಬುದು ನಾಗರಿಕ ಪ್ರಪಂಚಕ್ಕೆ ಶಿಕ್ಷಾಕೇಂದ್ರವಾಗಿ ಪರಿಗಣಿತವಾಗಿತ್ತು.

ಅಂದ ಹಾಗೆ ಇಂದು 'ವನ'ವೆಂಬ ಪದಕ್ಕೆ ಅರಣ್ಯ ಅಥವಾ ಕಾಡು ಎಂಬ ಅರ್ಥ ಉಳಿದಿಲ್ಲ, 'ವನ'ವೆಂದರೆ ಕೃತಕ ಅಥವಾ ಸಂರಕ್ಷಿತ ಮೋಜಿನ ತಾಣ ಎಂಬ ಅರ್ಥಕ್ಕೆ ಇಳಿದಿದೆ, 'ಕಾಡು ಅಥವಾ ಅರಣ್ಯ'ದಲ್ಲಿ ದಟ್ಟತೆ, ಕ್ರೂರತೆ, ವೈವಿಧ್ಯತೆ ಮತ್ತು ಸೌಂದರ್ಯತೆಯ ಅರ್ಥ ತರಂಗಗಳು ಮೂಡುತ್ತವೆ.

■ ಶಿಕಾಕು

# ಮಾತೇ ಮುತ್ತು

★ ಬದುಕಿನಲ್ಲಿ ಮೇಲೇರಬೇಕೆಂಬ ಅಭಿಲಾಷೆ ಇರಬೇಕು. ಅದಕ್ಕನುಗುಣವಾದ ಮನೋದಾರ್ಢ್ಯ, ಸಾಧನೆ, ನಿರಂತರತೆ ಇದ್ದಾಗ ಮಾತ್ರ ಯಶಸ್ಸು ಪ್ರಾಪ್ತವಾಗುತ್ತದೆ.

–ವೀರೇಂದ್ರ ಹೆಗ್ಗಡೆ

★ ನಾನು ಯಾವತ್ತೂ ವೈಫಲ್ಯದ ಬಗ್ಗೆ ಚಿಂತಿಸಿಲ್ಲ. ಅದು ಕ್ರೀಡೆಯ ಒಂದು ಭಾಗ. ನನ್ನ ಗಮನವೇನಿದ್ದರೂ ಕಠಿಣ ಅಭ್ಯಾಸದತ್ತ.

–ರಾಹುಲ್ ದ್ರಾವಿಡ್

★ ಜಾತಿ ಕಾರಣಕ್ಕೆ ಒಬ್ಬರನ್ನು ಪ್ರೀತಿಸುವುದು ಎಷ್ಟು ಕೆಟ್ಟದ್ದೋ, ಕೇವಲ ಜಾತಿ ಕಾರಣಕ್ಕಾಗಿ ಒಬ್ಬರನ್ನು ದ್ವೇಷಿಸುವುದು ಕೂಡಾ ಅಷ್ಟೇ ಕೆಟ್ಟದ್ದು.

–ಅನುಭವಾಮೃತ

★ ಪ್ರಯತ್ನಿಸುವವರೆಗೂ 'ಏನು ಮಾಡಬಲ್ಲೆ' ಎಂಬುದು ಯಾರಿಗೂ ತಿಳಿಯದು.

–ಪಬ್ಲಿಯಸ್ ಸೈರಸ್

★ ಇರುವುದು ಒಂದೇ ಪ್ರಪಂಚ. ಕೆಲವರಿಗೆ ಸ್ವರ್ಗವಾಗಿ ಕಂಡರೆ ಮತ್ತೆ ಕೆಲವರಿಗೆ ನರಕವಾಗಿ ಕಾಣುತ್ತದೆ!

–ಎಮರ್‌ಸನ್

★ ಬಹುಜನರು ಮಾಡಿದುದೆ ಪಾಪವಾದರೂ ಪುಣ್ಯ! ಬಹುಜನರು ಸೇರಿದುದೆ ನರಕವಾದರೂ ಸ್ವರ್ಗ!

–ಕುವೆಂಪು

★ ಬಡವರಿಗೆ ನೆರವು ನೀಡುವುದೇ ನನ್ನ ಕಾಯಕವಾಗಲಿ.

–ಕವಿ ಇಕ್ಬಾಲ್

★ ಪ್ರೀತಿಯನ್ನು ನೀಡುವವರೂ, ಪಡೆಯುವವರೂ ಧನ್ಯರು. ಅದರಿಂದ ಇಬ್ಬರಿಗೂ ಆನಂದ, ತೃಪ್ತಿ ಉಂಟಾಗುತ್ತದೆ.

–ಸ್ವಾಮಿ ಜಗದಾತ್ಮಾನಂದ

★ ದೇವರನ್ನು ಪ್ರಾರ್ಥಿಸು; ಆದರೆ ನಿನ್ನ ದೋಣಿ ನೀನು ನಡೆಸು.

–ರಷ್ಯಾ ಗಾದೆ

★ ಪ್ರೇಮಕಾಗಿಯೆ ನಲಿವ ಸತ್ಯಕಾಮರು ನಾವು, ಸತ್ಯವಾನ್ ಸಾವಿತ್ರಿಯಲ್ಲದಿಲ್ಲ.

–ಚೆನ್ನವೀರ ಕಣವಿ

★ 'ನಮ್ಮನ್ನು ಪ್ರೀತಿಸುವವರಿದ್ದಾರೆ' ಎನ್ನುವ ನಂಬಿಕೆಯೇ ಜೀವನದ ಅತ್ಯಂತ ಹೆಚ್ಚಿನ ಸುಖ.

–ವಿಕ್ಟರ್ ಹ್ಯೂಗೋ

★ ಕಠೋರತೆಗಿಂದ ಮೃದುತ್ವ, ಬಂಡೆಗಿಂತ ನೀರು, ಶಕ್ತಿಗಿಂತ ಪ್ರೀತಿ ಹೆಚ್ಚು ಶಕ್ತಿ ಉಳ್ಳದ್ದು.

–ಹರ್ಮನ್ ಹೆಸ್

★ ಕನಸು ಮನಸುಗಳಿಗೂ ಮೀರಿದಂಥದ್ದು ಪ್ರಾರ್ಥನೆಯಿಂದ ಸಾಧ್ಯವಾಗುತ್ತದೆ.

–ಲಾರ್ಡ್ ಟೆನಿಸನ್